**ಸಾಕ್ಷಿಯನ್ನು ದಿನಾಂಕ 18.06.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ.ಬಿ ಎಲ್ ಟಿ ವಕೀಲರಿಂದಃ**

ದಾವಾ ಆಸ್ತಿ ಮೂಲತಃ ನಮ್ಮ ಅಜ್ಜಿಯಾದ ಮುದ್ದಮ್ಮ ಕೋಂ ಮಾದಯ್ಯ ರವರಿಗೆ ಸೇರಿದ ಆಸ್ತಿಯಾಗಿರುತ್ತದೆ. ಅವರುಗಳು ನನ್ನ ಅಜ್ಜಿ ಹಾಗೂ ತಾತ ಎಂದು ತೋರಿಸಲು ಮ್ಯುಟೇಷನ್ ಹಾಗೂ ಪಹಣಿ ಪತ್ರಿಕೆ ಹಾಜರುಪಡಿಸಿರುತ್ತೇನೆ. ನನ್ನ ತಂದೆ ಹೆಸರು ವಿಷಕಂಠಯ್ಯ ಎಂಬುದಾಗಿರುತ್ತದೆ. ನನ್ನ ತಂದೆ ಹೆಗ್ಗುಡಿಲು ಗ್ರಾಮದ ವಾಸಿಯಾಗಿರುತ್ತಾರೆ. ನಾನು ನನ್ನ ತಂದೆಯ ಜೊತೆ ಹೆಗ್ಗುಡಿಲು ಗ್ರಾಮದಲ್ಲಿ ವಾಸವಿದ್ದ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ. ನನ್ನ ತಾತ ಹಾಗೂ ಅಜ್ಜಿಗೆ ಗಿರಿಜಮ್ಮ ಒಬ್ಬಳೇ ಮಗಳಿರುತ್ತಾಳೆ. ಅವರಿಗೆ ನನ್ನ ತಾಯಿ ಗಿರಿಜಮ್ಮ ಒಬ್ಬಳೇ ಮಗಳು ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ.

ನನ್ನ ಮದುವೆ ಹೆಗ್ಗುಡಿಲು ಗ್ರಾಮದಲ್ಲಿ ಆಗಿರುತ್ತದೆ. ಆಗ ನನ್ನ ತಂದೆ ತಾಯಿ ಇಬ್ಬರು ಮೃತಪಟ್ಟಿದ್ದರು. ಸಾಕ್ಷಿ ಮುಂದುವರೆದು ನನ್ನ ಅಜ್ಜಿ ಮುದ್ದಮ್ಮ ಇದ್ದಿದ್ದರು ಎಂದು ನುಡಿಯುತ್ತಾರೆ. ನನ್ನ ತಂದೆ ತಾಯಿ ಮೃತಪಟ್ಟು ಎಷ್ಟು ವರ್ಷ ಆಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ನನ್ನ ತಾಯಿ ಮೊದಲು ತೀರಿಕೊಂಡಿದ್ದು ಆನಂತರ ನನ್ನ ತಂದೆ ತಿರಿಕೊಂಡಿರುತ್ತಾರೆ. ನನ್ನ ಅಜ್ಜಿ ಮುದ್ದಮ್ಮ ತೀರಿಕೊಂಡು ಸುಮಾರು 30 ವರ್ಷಗಳಾಗಿರುತ್ತದೆ. ನನ್ನ ತಂದೆ ತಾಯಿ ಹಾಗೂ ಅಜ್ಜಿ ತೀರಿಕೊಂಡ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲ. ನನಗೆ ಮದುವೆಯಾದ ಬಗ್ಗೆ ಯಾವುದೇ ಲಗ್ನ ಪತ್ರಿಕೆ ಅಥವಾ ಕುಂಡಲಿ ಇರುವುದಿಲ್ಲ. ಪ್ರತಿವಾದಿಗಳು ನಮಗೆ ಯಾವುದೇ ಸಂಬಂಧಿಕರಲ್ಲ.

ದಾವಾ ಆಸ್ತಿ ನನ್ನ ಅಜ್ಜಿ ಮುದ್ದಮ್ಮ ಕೋಂ ಮಾದಯ್ಯ ಅವರಿಗೆ ಮಂಜೂರಾಗಿರುತ್ತದೆ. ಆ ರೀತಿ ಮಂಜುರಾತಿಯಾದ ಬಗ್ಗೆ ನೀಡಿದ ಸಾಗುವಳಿ ಚೀಟಿ ಕಳೆದು ಹೋಗಿರುತ್ತದೆ. ಅದು ಎಷ್ಟು ವರ್ಷಗಳ ಹಿಂದೆ ಕಳೆದು ಹೋಗಿರುತ್ತದೆ ಎಂದು ನನಗೆ ನೆನಪಿರುವುದಿಲ್ಲ. ದಾವಾ ಆಸ್ತಿಗೆ ಸಂಬಂಧಿಸಿದಂತೆ 1 ನೇ ಪ್ರತಿವಾದಿಗೆ ಸರ್ಕಾರದಿಂದ ಮಂಜುರಾಗಿದ್ದು ಆ ಬಗ್ಗೆ ಸಾಗುವಳಿ ಚೀಟಿ ನೀಡಿರುತ್ತಾರೆ ಎಂದರೆ ಸರಿಯಲ್ಲ. ಹೊಂಬಾಳೆ ದೊಡ್ಡಯ್ಯ ಎನ್ನುವವರಿಗೆ ನಿಂಗಮ್ಮ, ದೊಡ್ಡಮುದ್ದಮ್ಮ ಹಾಗೂ ಮುದ್ದಮ್ಮ ಅಲಿಯಾಸ್ ಹೊಂಬಾಳೆ ಎನ್ನುವ ಮೂರು ಜನ ಹೆಣ್ಣುಮಕ್ಕಳಿದ್ದರು ಎಂದರೆ ಸರಿಯಲ್ಲ. ಸದರಿ ನಿಂಗಮ್ಮ ಎನ್ನುವವರ ಗಂಡ ಮಾದಯ್ಯ ಎಂಬುದಾಗಿದ್ದು ಮಾದಮ್ಮ ಎನ್ನುವ ಒಬ್ಬಳೇ ಮಗಳು ಇದ್ದಳು ಎಂದರೆ ಸರಿಯಲ್ಲ. ಸದರಿ ಮಾದಮ್ಮನಿಗೆ ಸಿದ್ದಯ್ಯ ಎನ್ನುವವರ ಜೊತೆ ಮದುವೆಯಾಗಿರುತ್ತದೆ ಎಂದರೆ ಆ ಬಗ್ಗೆ

ಗೊತ್ತಿರುವುದಿಲ್ಲ. ಸದರಿ ಮಾದಮ್ಮ ಹಾಗೂ ಸಿದ್ದಯ್ಯ ಎನ್ನುವವರಿಗೆ 1 ನೇ ಪ್ರತಿವಾದಿ ಮಹದೇವಯ್ಯ, ಮಣಕಾರಯ್ಯ ಹಾಗೂ ಪುಟ್ಟಯ್ಯ ಎನ್ನುವ ಮೂರು ಜನ ಮಕ್ಕಳು ಇರುತ್ತಾರೆ ಎಂದರೆ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಸದರಿ ಹೊಂಬಾಳೆ ದೊಡ್ಡಯ್ಯನವರ 2 ನೇ ಮಗಳಾದ ದೊಡ್ಡಮುದ್ದಮ್ಮನಿಗೆ ಮಾದಯ್ಯ ಎನ್ನುವವರ ಜೊತೆ ಮದುವೆಯಾಗಿದ್ದು ಅವರಿಗೆ ಗಿರಿಜಮ್ಮ ಎನ್ನುವ ಒಬ್ಬಳೇ ಮಗಳು ಇದ್ದಳು ಎಂದರೆ ಸರಿ. ಸದರಿ ಗಿರಿಜಮ್ಮನಿಗೆ ದೊಡ್ಡಯ್ಯ ಎನ್ನುವವರ ಜೊತೆ ಮದುವೆಯಾಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ತಂದೆ ವಿಷಕಂಠಯ್ಯ ಎಂಬುವವರ ಜೊತೆ ಮದುವೆಯಾಗಿರುತ್ತದೆ ಎಂದು ನುಡಿಯುತ್ತಾರೆ. ಆ ರೀತಿ ಗಿರಿಜಮ್ಮ ತನ್ನ ಮೊದಲನೇ ಗಂಡ ದೊಡ್ಡಯ್ಯ ತೀರಿಹೋದ ನಂತರ ವಿಷಕಂಠಯ್ಯ ಎಂಬುವವರನ್ನು ಮದುವೆಯಾಗಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಗಿರಿಜಮ್ಮ ಹಾಗೂ ಅವರ ಮೊದಲನೇ ಗಂಡ ದೊಡ್ಡಯ್ಯನಿಗೆ ರತ್ನಮ್ಮ ಎನ್ನುವ ಒಬ್ಬಳೇ ಮಗಳು ಇರುತ್ತಾಳೆ ಎಂದರೆ ಸರಿಯಲ್ಲ. ಸದರಿ ಗಿರಿಜಮ್ಮ ಹಾಗೂ ಅವರ 2 ನೇ ಗಂಡ ವಿಷಕಂಠಯ್ಯನಿಗೆ ಸಣ್ಣಮ್ಮ ಹಾಗೂ ಮಹದೇವಮ್ಮ ಎನ್ನುವ ಇಬ್ಬರು ಹೆಣ್ಣು ಮಕ್ಕಳು ಇರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾವು ಮೂರು ಜನರು ಸಹ ಗಿರಿಜಮ್ಮ ಹಾಗೂ ವಿಷಕಂಠಯ್ಯನವರ ಮಕ್ಕಳು ಎಂದು ನುಡಿಯುತ್ತಾರೆ.

ಮುದ್ದಮ್ಮ ಎನ್ನುವವರು ನನ್ನ ಅಜ್ಜಿಯಲ್ಲ ಬದಲಾಗಿ ನನ್ನ ಅಜ್ಜಿಯಾದ ದೊಡ್ಡಮುದ್ದಮ್ಮನವರ ತಂಗಿ ಎಂದರೆ ಸರಿಯಲ್ಲ. ನನ್ನ ಅಜ್ಜಿಯ ತಂಗಿ ಮುದ್ದಮ್ಮನಿಗೆ ಕಾಳಯ್ಯ ಅಲಿಯಾಸ್ ಮಾದಯ್ಯ ಎನ್ನುವವರ ಗಂಡನಾಗಿರುತ್ತಾರೆ ಎಂದರೆ ಸರಿಯಲ್ಲ. ಸದರಿ ನನ್ನ ಅಜ್ಜಿಯ ತಂಗಿ ಮುದ್ದಮ್ಮ ಹಾಗೂ ಕಾಳಯ್ಯ ಅಲಿಯಾಸ್ ಮಾದಯ್ಯ ಎನ್ನುವವರಿಗೆ ಯಾವುದೇ ಮಕ್ಕಳಿಲ್ಲದೇ ಇದ್ದು ನಿಂಗಮ್ಮನ ಮಗಳಾದ ಮಾದಮ್ಮನ ಮಗನಾದ 1 ನೇ ಪ್ರತಿವಾದಿಯನ್ನು ಆತ ಮೂರು ತಿಂಗಳು ಮಗುವಾಗಿದ್ದಾಗ ಮನೆಗೆ ಕರೆಸಿಕೊಂಡು ಸಾಕಿಕೊಂಡಿದ್ದರು ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಮಕ್ಕಳಾದ 3 ಹಾಗೂ 4 ನೇ ಪ್ರತಿವಾದಿಗಳು ಸದರಿ ಮುದ್ದಮ್ಮ ಹಾಗೂ ಕಾಳಯ್ಯ ಅಲಿಯಾಸ್ ಮಾದಯ್ಯನವರ ಮನೆಯಲ್ಲಿಯೇ ಜನಿಸಿರುತ್ತಾರೆ ಎಂದರೆ ಸರಿಯಲ್ಲ. ಅದೇ ರೀತಿ 1 ನೇ ಪ್ರತಿವಾದಿಗೆ ಸದರಿ ಮುದ್ದಮ್ಮ ಹಾಗೂ ಕಾಳಯ್ಯ ಅಲಿಯಾಸ್ ಮಾದಯ್ಯನವರೇ ಮದುವೆ ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ.

ನಮ್ಮ ಅಜ್ಜಿ ಮುದ್ದಮ್ಮನನ್ನು ನಾನು ನೋಡಿರುತ್ತೇನೆ. ನನ್ನ ಅಜ್ಜಿ ಮುದ್ದಮ್ಮರವರಿಗೆ ದಾವಾ ಆಸ್ತಿ ಹೊರತುಪಡಿಸಿ ಬೇರೆ ಯಾವುದೇ ದಾಖಲೆ ಇರುವುದಿಲ್ಲ. ನಿಪಿ–1 ರಲ್ಲಿ ತೋರಿಸಿದ ಜಮೀನು ಯಾರಿಗೆ ಸೇರಿದ್ದು ಎಂದು ನನಗೆ ಗೊತ್ತಿರುವುದಿಲ್ಲ. ನಿಪಿ–2 ಹಾಗೂ 3

ದಾಖಲೆಗಳನ್ನು ಪ್ರತಿವಾದಿಗಳು ತೊಂದರೆ ಕೊಡುತ್ತಿದ್ದರೆಂದು ಹಾಜರುಪಡಿಸಿರುತ್ತೇನೆ. ನಿಪಿ–4 ರಲ್ಲಿ ಕಾಣಿಸಿರುವ ಮುದ್ದಮ್ಮ ಕೋಂ ಮಾದಯ್ಯ ಎನ್ನುವವರು 1ನೇ ಪ್ರತಿವಾದಿಯ ಸಾಕುತಾಯಿ ಎಂದರೆ ಸರಿಯಲ್ಲ. ನಿಪಿ–5 ರಂತೆ ದಾವಾ ಆಸ್ತಿಗೆ ಸಂಬಂಧಿಸಿದಂತೆ ನಮಗೆ ಖಾತೆಯಾಗುವ ಪೂರ್ವದಲ್ಲಿ ಅದು ನನ್ನ ಅಜ್ಜಿ ಮುದ್ದಮ್ಮ ಕೋಂ ಮಾದಯ್ಯರವರ ಹೆಸರಿನಲ್ಲಿ ಇದ್ದಿರುತ್ತದೆ. ಅವರ ನಂತರ ಬೇರೆ ಯಾರ ಹೆಸರಿಗೆ ಖಾತೆ ಬದಲಾಗಿರುವುದಿಲ್ಲ. ಆ ರೀತಿ ಖಾತೆ ಬದಲಾದ ಬಗ್ಗೆ ಮ್ಯುಟೇಷನ್ ರಿಜಿಸ್ಟರ್ ಆದೇಶ ಪ್ರತಿ ಹಾಜರುಪಡಿಸಿರುತ್ತೇನೆ. ನಾನು ಐ ಎನ್ ಹೆಚ್ ಎಮ್ ಆರ್ 1/1998–99 ರ ಮ್ಯುಟೇಷನ್ ಪ್ರತಿಯನ್ನು ವಸ್ತುಸ್ಥಿತಿ ಮರೆಮಾಚುವ ಉದ್ದೇಶದಿಂದ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಆ ರೀತಿ ಖಾತೆ ಬದಲಾಯಿಸುವ ಸಂಬಂಧ ವಾದಿಗಳಾದ ನಾವು ಮೂವರು ಅರ್ಜಿ ನೀಡಿರುತ್ತೇವೆ. ಆ ರೀತಿ ಖಾತೆ ಬದಲಿಸುವ ಸಂಬಂಧ ವಂಶವೃಕ್ಷ ಹಾಗೂ ಚೆಕ್ಕುಬಂದಿ ನೀಡಿರುತ್ತೇವೆ. ಆ ಸಮಯದಲ್ಲಿ ನಮ್ಮ ಅಜ್ಜಿ ಮುದ್ದಮ್ಮ ರವರಿಗೆ ಸಂಬಂಧಿಸಿದಂತ ಮ್ಯುಟೇಷನ್ ರಿಜಿಸ್ಟರ್ ಪ್ರತಿಯನ್ನು ಸಹ ಹಾಜರುಪಡಿಸಿರುತ್ತೇನೆ. ನಾವು ಅರ್ಜಿ ನೀಡುವಾಗ ನಮ್ಮ ಅಜ್ಜಿ ಮುದ್ದಮ್ಮ 10 ವರ್ಷದ ಹಿಂದೆ ಮೃತರಾಗಿರುವುದಾಗಿ ತಿಳಿಸಿರುತ್ತೇನೆ.

**ಈ ಹಂತದಲ್ಲಿ ಪ್ರತಿವಾದಿಗಳ ಪರ ವಕೀಲರು ಮುಂದಿನ ಪಾಟೀ ಸವಾಲಿಗಾಗಿ ಸಮಯಾವಕಾಶವನ್ನು ಕೋರಿದ್ದು, ಸಮಯಾವಕಾಶವನ್ನು ನೀಡಿ ಮುಂದೂಡಲಾಯಿತು.**

(**ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)

**ಓ ಹೇ ಕೇ ಸಾ ಸ ಇ ಒ.,**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ಹೆಗ್ಗಡದೇವನಕೋಟೆ.**